ತಮ್ಮಿಬ್ಬರ ನಡುವೆ ಇರುವುದು ನಿಜವಾದ ಪ್ರೀತಿಯೋ? ಆಕರ್ಷಣೆಯೋ?

ತನಿಷಾ ಮತ್ತು ಸುಪ್ರೀತ್ ಅವರಿಗೆ ತಮ್ಮ ಸಂಬಂಧದ ಸ್ವರೂಪದ ಬಗ್ಗೆ ಸ್ಪಷ್ಟತೆಯಿಲ್ಲ. ಹಾಗೆಂದು ಅವರದು ಅಸ್ಪಷ್ಟ ನಂಟೂ ಅಲ್ಲ. ಸ್ನಾತಕೋತ್ತರ ಪದವಿ ಓದುವುದಕ್ಕೆಂದು ನಗರಕ್ಕೆ ಬಂದಿರುವ ಇಬ್ಬರು ಪರಸ್ಪರ ಆಕರ್ಷಣೆಗೆ ಒಳಗಾಗಿದ್ದರು. ‘ಇಬ್ಬರ ನಡುವೆ ಹೊಂದಾಣಿಕೆ ಚೆನ್ನಾಗಿದೆ ಅನ್ನಿಸಿದರೆ, ಇದೇ ಒಲವು–ಆಕರ್ಷಣೆ ಮುಂದೆಯೂ ಉಳಿದರೆ ನಾವು ಮದುವೆ ಆಗಲೂಬಹುದು’ ಎನ್ನುವ ಭಾವನೆ ಇಬ್ಬರಲ್ಲಿಯೂ ಇದೆ.

ದುಡುಕಿನ ನಿರ್ಧಾರ ತೆಗೆದುಕೊಳ್ಳುವಷ್ಟು ಅಪ್ರಬುದ್ಧರೇನಲ್ಲ ಅವರು. “ನಮ್ಮ ನಡುವೆ ಮೊದಲ ನೋಟಕ್ಕೇ ಪ್ರೇಮವೇನೂ ಅಂಕುರಿಸಲಿಲ್ಲ. ಅಂತಹ ಒಂದು ಮಿಂಚಿನ ಸಂಚಾರದಂತಹ ಪ್ರೇಮದ ಬಗ್ಗೆ ನನಗೆ ನಂಬಿಕೆಯೂ ಇಲ್ಲ. ಆದರೆ ತನಿಷಾ ಜೊತೆಗೆ ಇರುವಾಗ ನಾನು ಬಹಳ ಖುಷಿಯಾಗಿರುತ್ತೇನೆ ಎಂದಷ್ಟೇ ಬಲ್ಲೆ. ಹಾಗಿದ್ದರೆ ಅವಳನ್ನು ಮದುವೆಯಾಗಿಬಿಡಬಹುದಲ್ಲ ಎಂಬ ಪ್ರಶ್ನೆಗೆ ನನ್ನ ಬಳಿ ಉತ್ತರವಿಲ್ಲ. ಅವಳೊಡನೆ ಮಾತನಾಡುವಾಗ ಅವಳೂ ಇದೇ ರೀತಿಯ ಮಾತುಗಳನ್ನು ಹೇಳಿದಳು. ಇಬ್ಬರ ಅಭಿಪ್ರಾಯವೂ ಒಂದೇ ಆಗಿದ್ದು, ಪದಗಳಷ್ಟೇ ಬೇರೆಯಾಗಿದ್ದವು. ಹಾಗಿದ್ದರೆ ಎರಡು ವರ್ಷಗಳ ಕಾಲ ಜೊತೆಗಿದ್ದು, ನಮ್ಮ ನಮ್ಮ ಆಸಕ್ತಿಯನ್ನು, ಸಹಬಾಳ್ವೆಯಲ್ಲಿರುವ ತೀವ್ರತೆಯನ್ನು ಗಮನಿಸಿ ಮುಂದುವರೆಯುವುದರಲ್ಲಿ ಅಭ್ಯಂತರ ಇಲ್ಲವಲ್ಲ ಎಂದು ‘ಲಿವ್ ಇನ್ ರಿಲೇಷನ್‌ಶಿಪ್’ ಅನ್ನು ಒಪ್ಪಿಕೊಂಡೆವು” ಎನ್ನುವ ಸುಪ್ರೀತ್ ಮಾತುಗಳಲ್ಲಿ ಯಾವ ಅಸ್ಪಷ್ಟತೆಯೂ ಇಲ್ಲ.

ಆದರೆ...

‘ಆದರೆ...’ ಎನ್ನುತ್ತ ಬಿಕ್ಕತೊಡಗಿದ ಸುಪ್ರೀತ್‌ಗೆ ಶಾಂತಲಾ ಸಮಾಧಾನ ಹೇಳುತ್ತಿದ್ದರು. ಎನ್‌ಜಿಒ ಒಂದರಲ್ಲಿ ಕೆಲಸ ಮಾಡುವ ಶಾಂತಲಾ, ಸುಪ್ರೀತ್–ತನಿಷಾರಂಥ ಅನೇಕರನ್ನು ಕಂಡವರು. ‘ನೀವಿಬ್ಬರೂ ಒಪ್ಪಿ ಈ ಸಂಬಂಧವನ್ನು ಬೆಳೆಸಿದ್ದೀರಿ. ಈಗ ಅವಳು ಹೊರಟು ಹೋದಳೆಂದು ನೀನು ಅಳುವುದು ಸರಿಯಲ್ಲ. ನೀನು ಈ ಸಂಬಂಧವನ್ನು ಹಚ್ಚಿಕೊಂಡಷ್ಟೇ, ಅವಳೂ ಹಚ್ಚಿಕೊಳ್ಳಬೇಕು ಎಂದು ಭಾವಿಸುವುದು ಸರಿಯಲ್ಲ. ನಿಧಾನಕ್ಕೆ ಯೋಚಿಸು. ನಿನ್ನ ಕೆಲಸದಲ್ಲಿ ಮನಸ್ಸನ್ನು ತೊಡಗಿಸಿಕೊ...’ ಎಂದು ಹೇಳುತ್ತ, ಅವನನ್ನು ಸ್ವಲ್ಪ ಹೊತ್ತು ಅಳುವುದಕ್ಕೆ ಬಿಟ್ಟು ಅಲ್ಲಿಂದ ಎದ್ದರು.

ಸಾಮಾನ್ಯವಾಗಿ ಯಾವುದೇ ಸಂಬಂಧದಲ್ಲಿ ದೀರ್ಘ ಕಾಲದವರೆಗೆ ತೀವ್ರತೆಯಿಂದ ತೊಡಗಿಕೊಳ್ಳುವುದು ಸುಲಭವೇನಲ್ಲ. ‘ಹುಡುಗಿಯರು ನೋಯುತ್ತಾರೆ. ಗಂಡು ಮಕ್ಕಳು ಕೆಸರಿದ್ದಲ್ಲಿ ಕಾಲಿಟ್ಟು ನೀರಿದ್ದಲ್ಲಿ ತೊಳೆದುಕೊಂಡು ಮುಂದುವರೆಯುತ್ತಾರೆ’ ಎಂದು ನಾವು ಭಾವಿಸುತ್ತೇವೆ. ಆದರೆ ಭಾವನೆಗಳ ತೀವ್ರತೆಗೆ ಸಂಬಂಧಿಸಿದಂತೆ ಇಬ್ಬರಲ್ಲಿಯೂ ಒಂದೇ ತೆರನಾದ ತಲ್ಲೀನತೆ ಇರುತ್ತದೆ. ನಂತರದ

